ದಿನಾಂಕಃ 27.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ 3 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ. ಎ ಕೆ ಕೆ ವಕೀಲರಿಂದಃ**

1 ನೇ ಪ್ರತಿವಾದಿಯು ತನ್ನ ಆಸ್ತಿಗಳನ್ನು ಸನ್ 1982 ರಲ್ಲಿ ತನ್ನ ಮಕ್ಕಳಿಗೆ ನ್ಯಾಯಾಲಯದ ಡಿಕ್ರಿ ಮೂಲಕ ಪಾಲು ವಾಟ್ನಿ ಮಾಡಿಕೊಟ್ಟಿರುತ್ತಾರೆಂದರೆ ನಿಜ. ಸಾಕ್ಷಿ ಮುಂದುವರೆದ ಆ ಸಮಯದಲ್ಲಿ 1 ನೇ ವಾದಿಯ ಗಂಡ ಆನಂದನ ಮದುವೆಯಾಗಿರಲಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಹಿರಿಯ ಮಗನ ಹೆಸರು ಅಶೋಕ ಅಂದರೆ 3 ನೇ ಪ್ರತಿವಾದಿ. ಆತ ಒಕ್ಕಲುತನ ಮಾಡುತ್ತಾನೆ. ಆತ ವೈದ್ಯಕೀಯ ವೃತ್ತಿ ಮಾಡುತ್ತಾನೆಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆಸಿರುತ್ತೇನೆಂದರೆ ಸರಿಯಲ್ಲ. 3 ನೇ ಪ್ರತಿವಾದಿ ತನ್ನ ಹೆಸರಿನಲ್ಲಿ ಖುಲ್ಲಾ ನಿವೇಶವನ್ನು ಖರೀದಿಸಿ, ಕಟ್ಟಡ ಕಟ್ಟಿಸಿರುತ್ತಾನೆಂದರೆ ನಿಜ. ಸಾಕ್ಷಿ ಮುಂದುವರೆದು ಎಲ್ಲರೂ ಸೇರಿಯೇ ಕಟ್ಟಿಸಿರುತ್ತಾರೆಂದು ನುಡಿಯುತ್ತಾರೆ. 3 ನೇ ಪ್ರತಿವಾದಿ ಸಾಲ ಪಡೆದು ಕಟ್ಟಡ ಕಟ್ಟಿಸಿರುತ್ತಾನೆಂದರೆ ಎಲ್ಲರೂ ಸಾಮೂಹಿಕವಾಗಿಯೇ ಎಸ್ ಬಿ ಐ ಬ್ಯಾಂಕನಲ್ಲಿ ಸಾಲ ಪಡೆದು ಕಟ್ಟಿಸಿರುತ್ತಾರೆಂದು ನುಡಿಯುತ್ತಾರೆ. ಎಲ್ಲರೂ ಸಾಮೂಹಿಕವಾಗಿ ಸಾಲ ಪಡೆದಿರುವ ಬಗ್ಗೆ ನಾನು ದಾಖಲೆ ನೋಡಿಲ್ಲ. ಆ ಬಗ್ಗೆ ನನ್ನ ಸ್ವಂತ ಬುದ್ಧಿಯಿಂದ ಹೇಳುತ್ತಿದ್ದೇನೆ. ಎಲ್ಲರೂ ಸಾಮೂಹಿಕವಾಗಿ ಸಾಲ ಪಡೆದು ಕಟ್ಟಡ ಕಟ್ಟಿಸಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸನ್ 1982 ರಲ್ಲಿ ಆದ ಪಾಲು ವಾಟ್ನಿಯಂತೆ ಎಲ್ಲರೂ ತಮ್ಮ ತಮ್ಮ ಪಾಲಿಗೆ ಬಂದ ಆಸ್ತಿತಗಳ ಕಬ್ಜಾ ವಹಿವಾಟಿಯಲ್ಲಿರುತ್ತಾರೆಂದರೆ ಸರಿಯಲ್ಲ. ಸನ್ 1982 ರಲ್ಲಿ ಆದ ಪಾಲು ವಾಟ್ನಿಯಲ್ಲಿ ಮೃತ ಆನಂದನಿಗೆ ಆಸ್ತಿಗಳು ಬಂದಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಎಲ್ಲಾ ಆಸ್ತಿಗಳು ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿ

ಇರುತ್ತವೆ ಎಂದು ನುಡಿಯುತ್ತಾರೆ . ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಯಾವುದೇ ಆಸ್ತಿಗಳು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ 10 ನೇ ಪ್ರತಿವಾದಿಯ ಪರ ಶ್ರೀ. ಎ .ಸಿ .ಡಿ ವಕೀಲರಿಂದಃ</u>**

ಸಂಜೀವಕುಮಾರ , ರಮೇಶ , ಆನಂದ ಮತ್ತು ರವಿ ಇವರ ಪೈಕಿ ಯಾರು ಹಿರಿಯರು ಎಂದರೆ ಸಾಕ್ಷಿಯು ಸಂಜೀವಕುಮಾರ, ರವಿ, ರಮೇಶ ಮತ್ತು ಆನಂದ ಈ ರೀತಿ ಇರುತ್ತಾರೆಂದು ನುಡಿಯುತ್ತಾರೆ. ನನಗೆ ಇವರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ರಮೇಶನು ರವಿಗಿಂತ ದೊಡ್ಡವನು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಕುಟುಂಬದಲ್ಲಿ ರಮೇಶ ಮತ್ತು ಆನಂದನನ್ನು ಹೊರತುಪಡಿಸಿ ಎಲ್ಲರೂ ವಿದ್ಯಾಂವತರು ಇರುತ್ತಾರೆಂದರೆ ನಿಜ. ಸಂಜೀವಕುಮಾರ ಇತನು ಇಂಜನೀಯರ್ ನಾಗಿದ್ದನು ಎಂದರೆ ನನಗೆ ಗೊತ್ತಿಲ್ಲ. ಆತ ಮೆಕ್ಯಾನಿಕಲ್ ವಿಭಾಗದಲ್ಲಿ ಇಂಜನೀಯರ್ ಪಡೆದು ಬೆಳಗಾವಿಯ ಮಾಣಿಕ ಬಾಗ್ ದಲ್ಲಿ ನೌಕರಿ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರಿಗೆ ಸಾಕಷ್ಟು ಜಮೀನು ಇರುವುದರಿಂದ ನೌಕರಿಯನ್ನು ಬಿಟ್ಟು ಆತ ಒಕ್ಕಲುತನ ಮಾಡಲು ಬಂದಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ದಾವಾ ಆಸ್ತಿಗಳ ಶೆಡ್ಯೂಲ್ ಎ ಪೈಕಿ ಅನುಕ್ರಮ ಸಂಖ್ಯೆ -13, 19, 31 ರಿಂದ 35, 41 ಹಾಗೂ ಶೆಡ್ಯೂಲ್ ಬಿ ಪೈಕಿ ಅನುಕ್ರಮ ಸಂಖ್ಯೆ 1 ರಲ್ಲಿಯ ¼ ಹಿಸ್ಸೆಯ ಆಸ್ತಿಗಳು ಮೃತ ಸಂಜೀವಕುಮಾರನ ಹೆಸರಿಗೆ ಇದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಂಜೀವಕುಮಾರ ಇತನು ದಿ.16.11.2001 ರಂದು ತೀರಿಕೊಂಡಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಆತ ತೀರಿಕೊಳ್ಳುವ ಮುಂಚೆ ಅಂದರೆ ದಿ.16.09.2001 ರಂದು ಮೇಲೆ ಹೇಳಿದ ತನ್ನ ಹೆಸರಿಗೆ ಇರುವ ಎಲ್ಲಾ ಆಸ್ತಿಗಳನ್ನು 10 ನೇ ಪ್ರತಿವಾದಿ ರವಿ ಇತನ ಹೆಸರಿಗೆ

ಮೃತ್ಯುಪತ್ರದ ಪ್ರಕಾರ ಬರೆದುಕೊಟ್ಟಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಸದರಿ ಮೃತ್ಯುಪತ್ರದ ಪ್ರಕಾರ ಮೇಲೆ ಹೇಳಿದ ಆಸ್ತಿಗಳು 10 ನೇ ಪ್ರತಿವಾದಿ ಹೆಸರಿಗೆ ದಾಖಲಾಗಿರುತ್ತವೆ ಎಂದರೆ ನಿಜ. ಆದ್ದರಿಂದ ಸದರಿ ಆಸ್ತಿಗಳಿಗೆ ಸಂಬಂಧಿಸಿದಂತೆ 10 ನೇ ಪ್ರತಿವಾದಿಯನ್ನು ಹೊರತುಪಡಿಸಿ ವಾದಿಗಳಿಗಾಗಲೀ ಅಥವಾ ಇತರೇ ಪ್ರತಿವಾದಿಗಳಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರವನ್ನಾಗಲೀ ಅಥವಾ ಅದಕ್ಕೆ ಸಂಬಂಧಿಸಿದ ಡೈರಿಯನ್ನಾಗಲೀ ಯಾರೂ ಪ್ರಶ್ನಿಸಿರುವುದಿಲ್ಲ ಎಂದರೆ ನಿಜ. 10 ನೇ ಪ್ರತಿವಾದಿಯು ಸಹ ವಕೀಲ ವೃತ್ತಿಯನ್ನು ಮಾಡುತ್ತಾನೆಂದರೆ ನಿಜ.

ಸನ್ 1982 ರಲ್ಲಿ ಕೋರ್ಟ ಡಿಕ್ರಿ ಮೂಲಕ ಆದ ಪಾಲು ವಾಟ್ನಿಯಲ್ಲಿ ಬ್ಲಾಕ ನಂಬರ 1037 ರಲ್ಲಿಯ 18 ಎಕರೆ 20 ಗುಂಟೆ ಜಮೀನು 10 ನೇ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆಂದರೆ ನನಗೆ ಗೊತ್ತಿಲ್ಲ. ಸದರಿ 10 ನೇ ಪ್ರತಿವಾದಿಯು ಮೇಲೆ ಹೇಳಿದ ಮೃತ್ಯುಪತ್ರದ ಪ್ರಕಾರ ಬಂದ ಆಸ್ತಿಗಳು, ವಾಟ್ನಿಯಲ್ಲಿ ಬಂದ ಆಸ್ತಿ , ಹಾಗೂ ತನ್ನ ವಕೀಲ ವೃತ್ತಿಯಿಂದ ಬಂದ ಆದಾಯದಿಂದ ದಾವಾಆಸ್ತಿಗಳ ಪೈಕಿ ಅನುಕ್ರಮ ಸಂಖ್ಯೆ -42, 52 ನೇದ್ದರ ಪೈಕಿ 02 ಎಕರೆ 12 ಗುಂಟೆ , ಅನುಕ್ರಮ ಸಂಖ್ಯೆ 29 ರಲ್ಲಿ 22 ಗುಂಟೆ, ಹಾಗೂ 03 ಎಕರೆ 32 ಗುಂಟೆ ಜಮೀನುಗಳನ್ನು ಖರೀದಿಸಿರುತ್ತಾರೆಂದರೆ ಸಾಕ್ಷಿಯು ಎಲ್ಲರೂ ಸಾಮೂಹಿಕವಾಗಿ ಖರೀದಿಸಿರುತ್ತಾರೆಂದು ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ಆಸ್ತಿಗಳಿಗೆ ಸಂಬಂಧಿಸಿದಂತೆ 10ನೇ ಪ್ರತಿವಾದಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ಆಸ್ತಿಗಳ ಪೈಕಿ ತನ್ನ ಸ್ವಯಾರ್ಜಿತ ಆಸ್ತಿಗಳಾದ ಅ. ಸಂ. 13, 31, 32 ಹಾಗೂ 35 ನೇದ್ದವುಗಳನ್ನು ತನ್ನ ಹೆಂಡತಿಯಾದ 11 ನೇ

ಪ್ರತಿವಾದಿಯ ಹೆಸರಿಗೆ ದಿ. 30.01.2013 ಕ್ಕೆ ಭಕ್ಷಿಸ ಪತ್ರದ ಮೂಲಕ ವರ್ಗಾವಣೆ ಮಾಡಿರುತ್ತಾರೆಂದರೆ ಸಾಕ್ಷಿಯು ಸುಳ್ಳು ಇರುತ್ತದೆಂದು ನುಡಿಯುತ್ತಾರೆ. ಸದರಿ ಭಕ್ಷಿಸ ಪತ್ರದ ಪ್ರಕಾರ ಮೇಲೆ ಹೇಳಿದ ಆಸ್ತಿಗಳಿಗೆ 11 ನೇ ಪ್ರತಿವಾದಿ ಮಾಲೀಕಳು ಆಗಿದ್ದು, ಸದರಿ ಆಸ್ತಿಗಳ ಕಬ್ಜಾ ವಹಿವಾಟಿಯಲ್ಲಿರುತ್ತಾರೆಂದರೆ ಸಾಕ್ಷಿಯು ಎಲ್ಲರೂ ಸಾಮೂಹಿಕವಾಗಿ ಕಬ್ಜೆಯಲ್ಲಿರುತ್ತಾರೆಂದು ನುಡಿಯುತ್ತಾರೆ.

ಮೃತ ರಮೇಶನು ಮೃತ ಆನಂದನ ಹೆಸರಿಗೆ ಮಾಡಿರುತ್ತಾನೆಂದು ಹೇಳುತ್ತಿರುವ ಮೃತ್ಯುಪತ್ರವನ್ನು ನಾನು ನೋಡಿರುವುದಿಲ್ಲ. ಸಂಜೀವಕುಮಾರ ತೀರಿಕೊಂಡ ನಂತರ ರಮೇಶ ತೀರಿಕೊಂಡಿದ್ದು, ದಿನಾಂಕ ನನಗೆ ಹೇಳಲು ಆಗುವುದಿಲ್ಲ. ಸದರಿ ರಮೇಶನು ದಿ.05.07.1996 ರಂದು ತೀರಿಕೊಂಡಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಸಂಜೀವಕುಮಾರ ಇತನು ದಿ. 16.11.2001 ರಂದು ತೀರಿಕೊಂಡಿರುತ್ತಾನೆಂದರೆ ನನಗೆ ದಿನಾಂಕ ಗೊತ್ತಿಲ್ಲ. ಆದ್ದರಿಂದ ನನಗೆ ಪ್ರತಿವಾದಿಯರ ಮನೆತನದ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ಸದರೀಯವರ ಮುಖಚಹರೆಯನ್ನು ಮಾತ್ರ ನೋಡಿ ಗುರುತಿಸುತ್ತಿದ್ದೆನು ಎಂದು ನುಡಿಯುತ್ತಾರೆ. ಸದರಿ ಮೃತ ರಮೇಶನು ಯಾವ ದಿನಾಂಕದಂದು ಮೃತ್ಯುಪತ್ರ ಮಾಡಿರುತ್ತಾನೆಂದು ನನಗೆ ಗೊತ್ತಿಲ್ಲ. ರಮೇಶ ತೀರಿಕೊಂಡ 05 ವರ್ಷಗಳ ನಂತರ ಮೃತ್ಯುಪತ್ರವನ್ನು ಮಾಡಿರುತ್ತಾನೆಂದರೆ ನನಗೆ ಗೊತ್ತಿಲ್ಲ. ರಮೇಶ ತೀರಿಕೊಂಡ 05 ವರ್ಷಗಳ ವರೆಗೂ ಸದರಿ ಮೃತ್ಯುಪತ್ರದ ಬಗ್ಗೆ ಬೆಳಕು ಕಂಡಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೃತ್ಯುಪತ್ರವನ್ನು ಮೃತ ಆನಂದನು ತನ್ನ ಹೆಸರಿನಲ್ಲಿ ಖೊಟ್ಟಿಯಾಗಿ ಸೃಷ್ಟಿಸಿಕೊಂಡಿರುತ್ತಾನೆಂದರೆ ಸರಿಯಲ್ಲ. ಆದ್ದರಿಂದ ದಾವಾ ಆಸ್ತಿ ಅ. ಸಂ. 1 ರಿಂದ 7 ನೇದ್ದವುಗಳಿಗೆ ಸಂಬಂಧಿಸಿದಂತೆ ಮೃತ ಆನಂದನಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ

ವಾದಿಯರಿಗೂ ಸಹ ಸದರಿ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ